**ದಿನಾಂಕಃ18.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ವಾದಿ ಪರ ಎ ಜಿ ವಕೀಲರಿಂದಃ**

ವಾದಿ ಮತ್ತು 1 ನೇ ಪ್ರತಿವಾದಿ ನನ್ನ ಹಿರಿಯ ಸಹೋದರಿಯರು ಎಂದರೆ ಹೌದು. ನನ್ನ ತಂದೆಯವರಿಗೆ ಯಾವುದೇ ಗಂಡು ಸಂತಾನ ಇಲ್ಲ ಎಂದರೆ ಹೌದು. ನನ್ನ ಮದುವೆ ಆಗಿ 22 ವರ್ಷ ಆಗಿದೆ. ನನ್ನ ಮದುವೆ ಆದ ನಂತರ ನನ್ನ ಗಂಡನೊಂದಿಗೆ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ನನ್ನ ಗಂಡ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಹೌದು ಹಾಗೂ ಅರಣ್ಯ ಇಲಾಖೆಯಲ್ಲೂ ಕೆಲಸ ಮಾಡುತ್ತಿದ್ದರು. ಅರಣ್ಯ ಇಲಾಖೆಯಲ್ಲಿ ದಿನಗೂಲಿಯಾಗಿ ಕೆಲಸ ಮಾಡುತ್ತಿದ್ದರು. ಹೊಟೆಲ್ ಕೆಲಸಕ್ಕೆ ಬೆಳಗ್ಗೆ 7.00 ರಿಂದ 10.30 ವರೆಗೆ ಹೋಗುತಿತದ್ದರು ಸಂಜೆ ಹೊತ್ತು ಹೋಗುತ್ತಿದ್ದರು. ಉಳಿದ ಸಮಯ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ನಾವು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೆನೆ. ಸುಮಾರು 5-6 ಕಡೆ ಮನೆ ಬದಲಾಯಿಸಿದ್ದೇವೆ. ಈಗ ಸುಮಾರು 21 ವರ್ಷಗಳಿಂದ ಮಲ್ಲೇಶ್ವರಂ ನಲ್ಲಿ ಇದ್ದೇವೆ. ಮಲ್ಲೇಶ್ವರಂ ನಲ್ಲಿ ಇದ್ದ ಹೋಟೆಲ್ ರಸಾ ಎಂಬಲ್ಲಿ ಕೆಲಸ ಮಾಡುತ್ತಿದ್ದರು. ಅವರು ಬನ್ನೇರುಘಟ್ಟದಲ್ಲಿ ಅರಣ್ಯ ಇಲಾಖೆಯ ಸಂಬಂಧ ಕೆಲಸ ಮಾಡುತ್ತಿದ್ದರು. ಎಂ ಜಿ ರಸ್ತೆಯಲ್ಲಿರು ಸ್ಪಿಫ್ಸ್ ಎಂಬ ಪಬ್ ನಲ್ಲಿ ಸುಮಾರು 10 ವರ್ಷಗಳ ಕಾಲ ಕೆಲಸ ಮಾಡಿರುತ್ತಾರೆ. ಮಲ್ಲೇಶ್ವರಂ ನಿಂದ ಬನ್ನೇರುಘಟ್ಟಕ್ಕೆ ಸುಮಾರು 14-15 ಕಿ ಮೀಟರ್ ಆಗುತ್ತದೆ. ಅರಣ್ಯ ಇಲಾಖೆಯಲ್ಲಿ ನನ್ನ ಗಂಡ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆ ಹಾಜರು ಪಡಿಸಬಹುದು. ಅವರಿಗೆ ಎಷ್ಟು ಸಂಬಳ ಅಥವಾ ದಿನಗೂಲಿ ಸಿಗುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನ ಸಂಪಾದನೆ ನಮ್ಮ ಕುಟುಂಬದ ನಿರ್ವಹಣೆಗೆ ಮಾತ್ರ ಸಾಕಾಗುತ್ತಿತ್ತು ಎಂದರೆ ಸರಿಯಲ್ಲ ನಾನೂ ಸಹ ಟೈಲರಿಂಗ್ ಕೆಲಸ ಮತ್ತು ರಚನಾ ಕಾನ್ವೆಂಟ್ ನಲ್ಲಿ ಗೈಡ್ ಲೈನ್ ಕಾನ್ವೆಂಟ್ ನಲ್ಲಿ ಟೀಚರ್ ಕೆಲಸವನ್ನು ಮದುವೆಗೂ ಮೊದಲು ಮಾಡುತ್ತಿದ್ದೆನು. ಮದುವೆ ಆದ ನಂತರ ನಾನು

ಟೀಚರ್ ಕೆಲಸ ಮಾಡುತ್ತಿರಲಿಲ್ಲ ಟೈಲರಿಂಗ್ ಕೆಲಸ ಮುಂದುವರೆಸಿದ್ದೇನೆ. ಅಂಗಡಿ ಮಳಿಗೆ ಮಾಡಿಕೊಂಡಿರಲಿಲ್ಲ ಮನೆಯಲ್ಲೇ ಮಾಡುತ್ತಿದ್ದೆ. ನನ್ನ ಗಂಡನ ಮನೆಯವರು ಅಷ್ಟು ಅನುಕೂಲವಾಗಿರಲಿಲ್ಲ ಎಂದರೆ ಹೌದು. ಅವರಿಗೆ ಯಾವುದೇ ಆಸ್ತಿ ಇರಲಿಲ್ಲ.

ನನ್ನ ಮದುವೆಯನ್ನು ನನ್ನ ತಾಯಿ ಮತ್ತು ನನ್ನ ಹಿರಿಯ ಸಹೋದರಿಯರು ಮತ್ತು ಅವರ ಕುಟುಂಬದವರು ಎಲ್ಲರೂ ಸೇರಿ ಮಾಡಿರುತ್ತಾರೆ ಎಂರದೆ ಸುಳ್ಳು ನನ್ನ ತಾಯಿಯವರು ಜಮೀನು ಮಾರಿ ಮಾಡಿರುತ್ತಾರೆ. ನನ್ನ ಗಂಡ ಅರಣ್ಯ ಇಲಾಖೆಯಲ್ಲಿ ಸರ್ಕಾರಿ ಕೆಲಸದಲ್ಲಿ ಇದ್ದಾರೆ ಎಂದು ನಾನು ವಿವಾಹ ಆಗಿರುತ್ತೇನೆ ಎಂದರೆ ಸರಿಯಲ್ಲ. ಹುಡುಗನ ಮನೆಯವರು ಒಳ್ಳೆಯವರು ಎಂದು ಹೇಳಿದ ಕಾರಣ ವಿವಾಹ ಆಗಿರುತ್ತೇನೆ. ನನ್ನ ತಂದೆ ನನ್ನ ತಾಯಿಯವರ ಮನೆಗೆ ಮನೆಯ ಅಳಿಯನಾಗಿ ಬಂದಿರುತ್ತಾರೆ ಎಂದರೆ ಹೌದು. ನನ್ನ ತಂದೆ ತಾಯಿಗೆ ವ್ಯಾಜ್ಯದ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಗಳು ಉತ್ಪತ್ತಿಯಾಗಲೀ ಇರಲಿಲ್ಲ ಎಂದರೆ ಸುಳ್ಳು ಬೇರೆ 1 ಎಕರೆ 3 ಗುಂಟೆ ಆಸ್ತಿ ಇತ್ತು ಅದನ್ನು ಅವರು ಕ್ರಯಕ್ಕೆ ಪಡೆದಿದ್ದರು. ಯಾರಿಂದ ಯಾವ ವರ್ಷ ಎಷ್ಟು ಮೊತ್ತಕ್ಕೆ ಕ್ರಯಕ್ಕೆ ಪಡೆದಿದ್ದರು ಎಂದರೆ ಗೊತ್ತಿಲ್ಲ ದಾಖಲೆ ಇದೆ ಹಾಜರು ಮಾಡಬಹುದು. ನನ್ನ ಅಕ್ಕಂದಿರ ವಿವಾಹವನ್ನು ಸ್ವಗ್ರಾಮದಲ್ಲೇ ಮನೆ ಮುಂದೆ ನನ್ನ ತಂದೆ ಮಾಡಿರುತ್ತಾರೆ ಎಂದರೆ ಹೌದು ಆದರೆ ಜೋರಾಗಿ ಮಾಡಿರುತ್ತಾರೆ. ನನ್ನ ವಿವಾಹವನ್ನು ಶ್ರವಣಬೆಳಗೊಳ ಕಲ್ಯಾಣ ಮಂಟಪದಲ್ಲಿ ವಿಜೃಂಬಣೆಯಿಂದ ಮಾಡಿರುತ್ತಾರೆ ಎಂದರೆ ಸರಳವಾಗಿ ಮಾಡಿರುತ್ತಾರೆ. ನನ್ನ ತಂದೆ ನನ್ನ ಗಂಡ ಅರಣ್ಯ ಇಲಾಖೆಯಲ್ಲಿ ಇದ್ದಾನೆ ಎಂದು ಬಹಳಷ್ಟು ವರದಕ್ಷಿಣೆ ಕೊಟ್ಟು ವಿವಾಹ ಮಾಡಿರುತ್ತಾರೆ ಎಂದರೆ ಸುಳ್ಳು. ನನ್ನ ವಿವಾಹಕ್ಕೆ ಮದುವೆ ಮಾಡಲು ನನ್ನ ಗಂಡನಿಗೆ ಹಣ ಹೊಂದಿಸಲು ಬಹಳಷ್ಟು ಆಸ್ತಿಗಳನ್ನು ನನ್ನ ತಂದೆ ಮಾರಾಟ ಮಾಡಿ ಒದಗಿಸಿರುತ್ತಾರೆ ಎಂದರೆ ಸುಳ್ಳು. ದಾವಾ ಆಸ್ತಿಗಳಲ್ಲಿ ಸಮಭಾಗಾಂಶದ ಹಿಸ್ಸೆಯನ್ನು ನನ್ನ ಹಿರಿಯ ಸಹೋದರಿಂದರಾದ ವಾದಿ ಮತ್ತು 1 ನೇ ಪ್ರತಿವಾದಿಗೆ ಕೊಡುವುದಾಗಿ ಮದುವೆ ಸಮಯದಲ್ಲಿ ನನ್ನ ತಂದೆಯವರು

ಹೇಳಿದ್ದರು ಎಂದರೆ ಸುಳ್ಳು ಅವರಿಗೆ ಏನು ಕೊಡಬೇಕು ಅದನ್ನೆಲ್ಲಾ ಕೊಟ್ಟು ಮದುವೆ ಮಾಡಿದ್ದರು ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಅವರಿಬ್ಬರಿಗೆ ಕೊಟ್ಟಿದ್ದಾರೆ ಎಂದು ನೀವು ಹೇಳಿದ್ದರುನಿಮಗಾ ಸಹ ಏನು ಕೊಡಬೇಕೋ ಅದನ್ನು ಕೊಟ್ಟು ವಿವಾಹ ಮಾಡಿರುತ್ತಾರೆ ಎಂದರೆ ಸುಳ್ಳು. ನಾನು ಹಾಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಿರಿಯ ಸಹೋದರಿಯರಿಗೂ ಏನೂ ಕೊಟ್ಟಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು. ನನ್ನ ಹಿರಿಯ ಸಹೋದರಿಯರಿಗೆ ಗ್ರಾಮದಲ್ಲಿ ಮನೆ ಮುಂದೆ ಸರಳವಾಗಿ ವಿವಾಹ ಮಾಡಿ ಅವರ ಭಾಗಾಂಶದ ಹಿಸ್ಸೆ ಉಳಿಸಿರುತ್ತಾರೆ, ನನ್ನ ವಿವಾಹಕ್ಕೆ ನನ್ನ ಭಾಗಾಂಶದ ಹಿಸ್ಸೆ ಮಾರಾಟ ಮಾಡಿ ವಿಜೃಂಬಣೆಯಿಂದ ವಿವಾಹ ಮಾಡಿರುತ್ತಾರೆ ಎಂದರೆ ಸುಳ್ಳು. ನನ್ನ ಭಾಗಾಂಶದ ಆಸ್ತಿಗಳನ್ನು ಮಾರಾಟ ಮಾಡಿ ಮದುವೆ ಮಾಡಿದ್ದ ಕಾರಣ ಮಾರಾಟ ಮಾಡದೆ ಉಳಿದ ಆಸ್ತಿಯಲ್ಲಿ ನಾನು ಯಾವುದೇ ಭಾಗಾಂಶ ಕೇಳುವುದಿಲ್ಲ ನನಗೆ ಹಕ್ಕು ಇರುವುದಿಲ್ಲ ಎಂದು ನಾನು ಮೌಖಿಕವಾಗಿ ಸಹ ಒಪ್ಪಿಕೊಂಡಿರುತ್ತೇನೆ ಎಂದರೆ ಸುಳ್ಳು. ನಾನು ಪಿ ಯು ಸಿ ಓದಿ ಟೀಚರ್ಸ್ ಟ್ರೇನಿಂಗ್ ಓದಿದ್ದೇನೆ ದಾಖಲೆಗಳು ಇವೆ. ನನಗೆ 1 ನೇ ತರಗತಿಯಿಂದ 4 ನೇ ತರಗತಿಯ ವಿದ್ಯಾರ್ಥಿಗಳಿಗೆ ಪಾಠ ಮಾಡುವ ಅರ್ಹತೆ ಇದೆ ಮತ್ತು ಅನುಮತಿ ಇದೆ. ನಾನು ಶಿಕ್ಷಕ ವೃತ್ತಿ ಮಾಡುವ ಅರ್ಹತೆಯನ್ನೇ ಹೊಂದಿರಲಿಲ್ಲ ಮತ್ತು ಅಂತಹ ವೃತ್ತಿ ಮಾಡಿ ಯಾವುದೇ ಸಂಪಾದನೆ ಮಾಡಿಲ್ಲ ಎಂದರೆ ಸುಳ್ಳು. ದಾಖಲೆಗಳು ಇವೆ ಹಾಜರು ಮಾಡಬಹುದು. ನಾನು ಕಾಂತರಾಜ ಪುರದ ರಚನಾ ಕಾನ್ವೆಂಟ್ ನಲ್ಲಿ 1997 ರಿಂದ 2000 ನೆ ಇಸವಿಯವರೆವಿಗೂ ಮಾಡಿರುತ್ತೇನೆ. ಆಗ ವೇತನ ಬಹಳ ಕಮ್ಮಿ ಇದ್ದು ಸಾವಿರ ರೂಪಾಯಿ ಕೊಟ್ಟರೆ ಹೆಚ್ಚಾಗಿತ್ತು. ಸಂಬಳವನ್ನು ನಗದು ರೂಪದಲ್ಲಿ ಕೊಡುತ್ತಿದ್ದರು. 2000 ದಿಂದ ಮಾರ್ಚ್ 2002 ರ ವರೆಗ ಗೈಡ್ ಲೈನ್ ಕಾನ್ವೆಂಟ್ ನಲ್ಲಿ ಕೆಲಸ ಮಾಡಿದ್ದೇನೆ. ಅಲ್ಲಿ ಸಹ ಒಂದು ವರೆ ಸಾವಿರ ನಗದು ಮುಖಾಂತರ ಸಂಬಳ ಕೊಡುತ್ತಿದ್ದರು. ಈ ರೀತಿ ಕೆಲಸ ಮಾಡಿರುವ ಬಗ್ಗೆ ದಾಖಲೆ ಹಾಜರು ಮಾಡಬಹುದು ಎಂದರೆ ಹಾಜರು ಮಾಡಬಹುದು ದಾಖಲೆಯನ್ನು ಈಗಾಗಲೇ ಕೊಟ್ಟಿದ್ದೇನೆ. ನಂಾನು ಆ

ರೀತಿ ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಶಾಲೆಯಲ್ಲಿ ಕೆಸಲ ಮಾಡಿಲ್ಲ ಯಾವುದೇ ವೇತನ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೆನೆ ಎಂದರೆ ಸರಿಯಲ್ಲ. ನಾನು ಕೇವಲ ತರಬೇತಿಗಾಗಿ ಹೋಗುತ್ತಿದ್ದೆ ವಿನಃ ಉಪಾಧ್ಯಾಯರಾಗಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

**(ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲಿಗೆ ಸಮಯ ನೀಡಿದೆ)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ